**Code No. 20 X**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

# (ವೇಗ ಮತ್ತು ಉಕ್ತಲೇಖನ)

ಜನವರಿ / ಫೆಬ್ರವರಿ, 2020

ವೇಳೆ { ಉಕ್ತಲೇಖನ : 10 ನಿಮಿಷಗಳು
ಲಿಪಿ ಬರಹ : 1 ಗಂಟೆ 30 ನಿಮಿಷಗಳು }

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರು (200) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಮಾನ್ಯ ಸಭಾಧ್ಯಕ್ಷರೇ,

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು
ನಾಲ್ಕು ವರ್ಷ ಕಳೆದಿದೆ. ಈ ಸಾಲಿನ
ಆಯವ್ಯಯದ ಮೇಲೆ ಇಲ್ಲಿಯವರೆಗೆ ಸಾಕಷ್ಟು
$\frac{1}{4}$ ಚರ್ಚೆಯಾ/ಗಿದೆ. ವಿರೋಧ ಪಕ್ಷದವರು ನಮ್ಮ
ಸರ್ಕಾರದ ಮೇಲೆ ಅನೇಕ ರೀತಿಯಲ್ಲಿ ಟೀಕೆ
ಟಿಪ್ಪಣಿಗಳನ್ನು ಮಾಡಿದ್ದಾರೆ. ಇದೂವರೆವಿಗೂ
$\frac{1}{2}$ ಸರ್ಕಾರ ಏನೂ ಕೆಲ/ಸ ಮಾಡಿಲ್ಲ,
ಸರ್ಕಾರದಲ್ಲಿ ಆರ್ಥಿಕ ಮುಗ್ಗಟ್ಟು ಎದುರಾಗಿದೆ
ಆದುದರಿಂದ ನೌಕರರಿಗೆ ಸಂಬಳ ಕೊಡಲೂ
$\frac{3}{4}$ ಹಣವಿಲ್ಲ ಹಾಗೂ ಅಭಿವೃದ್ಧಿ ಕೆಲಸಗ/ಳನ್ನು
ಮಾಡಲು ಸರ್ಕಾರ ಮೀನಾ ಮೇಷ
ಎಣಿಸುತ್ತಿದೆಯೆಂದು ಆಪಾದನೆ ಮಾಡಿರುವುದು
ದುರುದ್ದೇಶದಿಂದ ಕೂಡಿದೆಯೆಂದು ತಮ್ಮ
ಮುಂದೆ ಹಾಗೂ ಈ ಸದನದX ಮುಂದೆ 1
ಹೇಳಬಯಸುತ್ತೇನೆ.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ
ಮೇಲೆ ಅನ್ನ ಭಾಗ್ಯ ಯೋಜನೆಯನ್ನು
ಜಾರಿಗೆ ತಂದಿದ್ದೇವೆ. ಪ್ರತೀ ಜಿಲ್ಲೆಯಲ್ಲೂ
ಇಂದಿರಾ ಕ್ಯಾಂಟೀ/ನ್ ಸ್ಥಾಪಿಸಿ ಬಡವರಿಗೆ, $\frac{1}{4}$
ದೀನದಲಿತರಿಗೆ, ನಿರ್ಗತಿಕರಿಗೆ ಐದು
ರೂಪಾಯಿಗೆ ತಿಂಡಿ ಹಾಗೂ ಹತ್ತು
ರೂಪಾಯಿಗೆ ಊಟದ ವ್ಯವಸ್ಥೆ
ಮಾಡಿರುವುದರಿಂದ ಹಸಿದ ಜೀವಗಳು/ $\frac{1}{2}$
ನೆಮ್ಮದಿಯಿಂದ ಬದುಕುವಂತಾಗಿದೆ.

ಶಾದಿ ಭಾಗ್ಯ ಯೋಜನೆಯನ್ನು ನಮ್ಮ
ಸರ್ಕಾರ ಜಾರಿಗೊಳಿಸಿರುವುದರಿಂದ ಬಡವರು,
$\frac{3}{4}$ ಹಿಂದು/ಳಿದವರು ಮದುವೆ ಮಾಡಿಕೊಳ್ಳಲು
ವಧುವಿಗೆ ತಾಳಿ, ಸೀರೆ, ರವಿಕೆ, ವರನಿಗೆ ಶರ್ಟು
ಮತ್ತು ಪಂಚೆಯನ್ನು ನೀಡುತ್ತಿರುವುದರಿಂದ
2 ಅವರಿಗೆ ಅನುಕೂXಲವಾಗಿದೆ.

ಇನ್ನು ನಮ್ಮ ಸರ್ಕಾರ ಮತ್ತೊಂದು
ಮಹತ್ತರವಾದ ಯೋಜನೆಯನ್ನು ಜಾರಿಗೆ
ತಂದಿದೆ. ಅದು ಏನೆಂದರೆ ಶಾಲಾ ಮಕ್ಕಳಿಗೆ
$\frac{1}{4}$ "ಕ್ಷೀರ ಭಾಗ್ಯ" ಯೋಜನೆ./ ಕರ್ನಾಟಕದ
ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ
ಒಂದನೇ ತರಗತಿಯಿಂದ ಹತ್ತನೇ ತರಗತಿಯ
$\frac{1}{2}$ ಮಕ್ಕಳಿಗೆ ಕರ್ನಾಟಕ ಹಾಲು ಉತ್ಪಾದ/ನಾ
ಮಹಾ ಮಂಡಳಿಯ ವತಿಯಿಂದ ಶುದ್ಧವಾದ
ಹಾಲನ್ನು ನೀಡಲಾಗುತ್ತಿದೆ. ಈ
ಯೋಜನೆಯನ್ನು ಕರ್ನಾಟಕದ ಎಲ್ಲಾ ಜನತೆ
$\frac{3}{4}$ ಸ್ವಾಗತಿಸಿದ್ದಾರೆ ಹಾಗೂ ಅಭಿ/ನಂದಿಸಿದ್ದಾರೆ.

ಇನ್ನು ರೈತರ ವಿಚಾರವಾಗಿ
ಹೇಳುವುದಾದರೆ ರೈತರೇ ಈ ದೇಶದ
ಬೆನ್ನೆಲುಬು. ರೈತರು ಚೆನ್ನಾಗಿದ್ದರೆ ರಾಜ್ಯ
3 ಹಾಗೂ ದೇಶ ಸುಭದ್ರವಾXಗಿರುತ್ತದೆ ಎಂದು
ಹೇಳಿದರೆ ತಪ್ಪಾಗಲಾರದು. ಕರ್ನಾಟಕದಲ್ಲಿ
ಕಳೆದ ಎರಡು ವರ್ಷಗಳಿಂದ ಬರಗಾಲ
ಬಂದಿರುವುದರಿಂದ ರೈತರು ಬಹಳ/ $\frac{1}{4}$
ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಕೆರೆಕಟ್ಟೆಗಳು
ನೀರಿಲ್ಲದೆ ಬತ್ತಿ ಹೋಗಿವೆ. ಆದಕಾರಣ
ಜಾನುವಾರುಗಳಿಗೆ ಕುಡಿಯಲಿಕ್ಕೆ ನೀರಿಲ್ಲದೇ
ಇ/ರುವುದರಿಂದ ಹಾಗೂ ಮೇವಿನ ಅಭಾವ $\frac{1}{2}$
ಉಂಟಾಗಿರುವುದರಿಂದ ಸಾವಿರಾರು
ದನಕರುಗಳು ಸತ್ತುಹೋಗಿವೆ. ಇಂತಹ
ಪರಿಸ್ಥಿತಿ ಉಂಟಾಗಿರುವುದರಿಂ/ದ ರೈತರು $\frac{3}{4}$
ಇಟ್ಟುಕೊಂಡಿರುವ ದನಕರುಗಳನ್ನು
ಕಸಾಯಿಖಾನೆಗೆ ಮಾರುತ್ತಿದ್ದಾರೆ.

ತಮ್ಮ ಜೀವನ ನಿರ್ವಹಣೆಗಾಗಿ
ಕರ್ನಾಟಕದ ಬೀದರ್, ವಿಜಯXಪುರ, 4
ರಾಯಚೂರು, ಕಲ್ಬುರ್ಗಿ, ಹಾವೇರಿ ಜಿಲ್ಲೆಗಳ
ಬಹುತೇಕ ರೈತರು ತಮ್ಮ ಹೆಂಡತಿ ಮಕ್ಕಳ
ಸಮೇತವಾಗಿ ಕೆಲಸ ಹುಡುಕಿಕೊಂಡು
ಬೆಂಗಳೂರು ಹಾಗೂ/ ಇನ್ನಿತರ ಜಿಲ್ಲೆಗಳಿಗೆ $\frac{1}{4}$
ವಲಸೆ ಹೋಗುತ್ತಿದ್ದಾರೆ. ಉತ್ತರ ಕರ್ನಾಟಕದ
ರೈತರು ಈ ರೀತಿ ತಂಡೋಪತಂಡವಾಗಿ
ವಲಸೆ ಹೋಗುತ್ತಿರುವುದನ್ನು ಮನ/ಗಂಡ $\frac{1}{2}$
ನಮ್ಮ ಸರ್ಕಾರ ಆ ಭಾಗಕ್ಕೆ ವಿಶೇಷ
ಅನುದಾನ ಘೋಷಣೆ ಮಾಡಿದೆ. ಇದರ

ಪರಿಣಾಮವಾಗಿ ರೈತರಿಗೆ ಅವರವರ ಊರಿನಲ್ಲಿ
$\frac{3}{4}$ ಕೂಲಿ ಕೆಲ/ಸ ಸಿಗುವಂತೆ ಏರ್ಪಾಡು ಮಾಡಿದೆ.
ಅಂದರೆ ಸರ್ಕಾರದಿಂದ ಹೊಸದಾಗಿ
ಕೆರೆಕಟ್ಟೆಗಳನ್ನು ಕಟ್ಟಿಸುವುದು, ಹಾಲೀ ಇರುವ
5 ಕೆರೆಕಟ್ಟೆಗಳ ಹೂಳು ತೆಗೆXಯುವ ಕಾರ್ಯವನ್ನು
ಮಾಡಿದ್ದರಿಂದ ರೈತರ ಹಿತರಕ್ಷಣೆ
ಮಾಡಿದಂತಾಗಿದೆಯೆಂದು ನಾನು ಈ
ಸದನದ ಮುಂದೆ ಘಂಟಾಘೋಷವಾಗಿ
ಹೇಳಲಿಚ್ಛಿಸುತ್ತೇನೆ.

$\frac{1}{4}$ ಇ/ನ್ನು ನಮ್ಮ ಸರ್ಕಾರ ಮತ್ತೊಂದು
ಪ್ರಮುಖವಾದಂತಹ ಯೋಜನೆಯನ್ನು
ಹಾಕಿಕೊಂಡಿದೆ. ರಾಜ್ಯಾದ್ಯಂತ ನಮ್ಮ ರೈತರು
$\frac{1}{2}$ ಸಹಕಾರಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ/
ಸಾಲ ಮಾಡಿದ್ದಾರೆ. ಬರಗಾಲದ ಪ್ರಯುಕ್ತ ಸದರಿ
ಸಾಲವನ್ನು ತೀರಿಸಲಾಗದೆ ಒದ್ದಾಡುತ್ತಿದ್ದಾರೆ.
$\frac{3}{4}$ ರೈತರು ಪಡೆದ ಸಾಲವನ್ನು ಮರುಪಾವತಿಸದೇ/
ಇರುವುದರಿಂದ ಬ್ಯಾಂಕಿನವರು ಸಾಲ
ಮತ್ತು ಬಡ್ಡಿಯನ್ನು ಕಟ್ಟಬೇಕೆಂದು ಕಿರುಕುಳ
ಕೊಡುತ್ತಿದ್ದಾರೆ. ಇದನ್ನು ಅರಿತ ನಮ್ಮ
6 ಸರ್ಕಾರ ಪ್ರತೀ ರೈತರ ಐXವತ್ತು ಸಾವಿರ
ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದೆ.
ಸದರಿ ಮೊತ್ತವನ್ನು ರೈತರ ಖಾತೆಗೆ ನೇರವಾಗಿ
ಜಮಾ ಮಾಡಲು ಕ್ರಮ ಕೈಗೊಂಡಿದ್ದೇವೆ.
ಇದ/ರಿಂದ ರಾಜ್ಯದ ರೈತರು $\frac{1}{4}$
ಋಣಮುಕ್ತರಾಗಿದ್ದಾರೆಂದು ಹೇಳಬಯಸುತ್ತೇನೆ.

ಇಷ್ಟೆಲ್ಲಾ ಜನಹಿತ ಕಾರ್ಯಗಳನ್ನು ನಮ್ಮ
ಸರ್ಕಾರ ಮಾಡಿದ್ದರೂ ವಿರೋಧ ಪಕ್ಷ/ದವರು $\frac{1}{2}$
ಸರ್ಕಾರ ಏನೂ ಹೇಳಿಕೊಳ್ಳುವಂತಹ ಕೆಲಸ
ಕಾರ್ಯಗಳನ್ನು ಮಾಡಿಲ್ಲ. ಸರ್ಕಾರದಲ್ಲಿ
ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲು
ಹಣವಿಲ್ಲ/ ಎಂದು ಟೀಕೆ ಮಾಡಿದ್ದನ್ನು $\frac{3}{4}$
ನೋಡಿದರೆ ಅವರಿಗೆ ನಮ್ಮ ಸರ್ಕಾರದ
ಸಾಧನೆಯನ್ನು ಸಹಿಸಿಕೊಳ್ಳಲಾಗುತ್ತಿಲ್ಲ ಎಂದು
ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.X 7

ಚಿಕ್ಕಮಗಳೂರು,
ದಿನಾಂಕ ಇಪ್ಪತ್ತನೇ ನವೆಂಬರ್ ಎರಡು
ಸಾವಿರದ ಹತ್ತೊಂಬತ್ತು.

ಮಾನ್ಯ ಸಂಪಾದಕರು, ಪ್ರಜಾವಾಣಿ ದಿನಪತ್ರಿಕೆ,
ಬೆಂಗಳೂರು ಇವ/ರಿಗೆ, $\frac{1}{4}$

ಮಾನ್ಯರೇ,

ನಮ್ಮ ಚಿಕ್ಕಮಗಳೂರು ನಗರಕ್ಕೆ ಕೇಂದ್ರ
ಸರ್ಕಾರದ ಅಮೃತ ಯೋಜನೆಯಡಿಯಲ್ಲಿ
ದಿನದ ಇಪ್ಪತ್ತನಾಲ್ಕು ಗಂಟೆ ಕಾಲ ಕುಡಿಯುವ
ನೀ/ರನ್ನು ಒದಗಿಸಲು ನಗರ ಸಭೆಯು $\frac{1}{2}$
ಯೋಜನೆ ಹಾಕಿಕೊಂಡು ನಗರದ ಎಲ್ಲಾ

ರಸ್ತೆಗಳಲ್ಲಿ ನೀರಿನ ಪೈಪು ಹಾಕಲು ಚರಂಡಿಯನ್ನು
$\frac{3}{4}$ ತೋಡಿರುತ್ತಾರೆ. ಇ/ದರ ಪರಿಣಾಮವಾಗಿ
ನಗರದ ಎಲ್ಲಾ ರಸ್ತೆಗಳು ಹಾಳಾಗಿವೆ.
ಚರಂಡಿಯನ್ನು ತೆಗೆದು ಪೈಪ್ ಅಳವಡಿಸಿ
8 ಸರಿಯಾಗಿ ಮುಚ್ಚದಿರುವುದರಿಂದ ಅXಲ್ಲಲ್ಲಿ
ಹೊಂಡಗಳು ನಿರ್ಮಾಣವಾಗಿವೆ. ನಮ್ಮ
ಜಿಲ್ಲೆಯಲ್ಲಿ ಕಳೆದ ಎರಡು ತಿಂಗಳಿಂದ
ಸತತವಾಗಿ ಮಳೆ ಸುರಿಯುತ್ತಿರುವುದರಿಂದ
$\frac{1}{4}$ ತೆಗೆದಿರುವ ಗುಂ/ಡಿಗಳಲ್ಲಿ ನೀರು
ತುಂಬಿಕೊಂಡು ರಸ್ತೆಗಳಲ್ಲಿ ಜನ ಓಡಾಡುವುದೇ
ಕಷ್ಟವಾಗಿದೆ ಹಾಗೂ ದ್ವಿಚಕ್ರ ವಾಹನಗಳನ್ನು
$\frac{1}{2}$ ಓಡಿಸುವುದೇ ಕಷ್ಟಕರವಾಗಿದೆ./ ಕಳೆದ ತಿಂಗಳು
ಸೈಕಲ್ ಸವಾರ ಗುಂಡಿಗೆ ಬಿದ್ದು ಕಾಲನ್ನು
ಮುರಿದುಕೊಂಡಿದ್ದಾನೆ. ಇಂತಹ ಅಪಘಾತಗಳು
ಪ್ರತೀ ದಿನ ಎಷ್ಟೋ ನಡೆಯುತ್ತಿರುತ್ತವೆ.
$\frac{3}{4}$ ಈ/ ಪರಿಸ್ಥಿತಿಯಿಂದ ರಾತ್ರಿ ವೇಳೆಯಲ್ಲಿ ಜನರು
ವಾಹನಗಳನ್ನು ಓಡಿಸಲು ಹಿಂದು ಮುಂದು
ನೋಡುವಂತಹ ಪರಿಸ್ಥಿತಿ ನಗರದಲ್ಲಿ
ನಿರ್ಮಾಣವಾಗಿದೆ.

ನXಗರದ ರಸ್ತೆಗಳಲ್ಲಿ ತೆಗೆದಿರುವ 9
ಗುಂಡಿಗಳನ್ನು ಸರಿಯಾಗಿ ಮುಚ್ಚಿ ಸಾರ್ವಜನಿಕರ
ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂದು
ನಗರ ಸಭೆ/ಗೆ ನಾನು ಎರಡು ಬಾರಿ ದೂರನ್ನು $\frac{1}{4}$
ಕೊಟ್ಟರೂ ನಗರ ಸಭೆಯ ಅಧಿಕಾರಿಗಳು
ರಸ್ತೆಯನ್ನು ದುರಸ್ತಿ ಮಾಡಿರುವುದಿಲ್ಲ.

ಆದುದರಿಂದ ಮಾನ್ಯ ಜಿಲ್ಲಾಧಿಕಾ/ ರಿಗಳು $\frac{1}{2}$
ಇತ್ತ ಕಡೆ ಗಮನಹರಿಸಿ ಗುಂಡಿಗಳನ್ನು ಆದಷ್ಟು
ಜಾಗ್ರತೆ ಮುಚ್ಚಿಸಬೇಕೆಂದು ಪ್ರಾರ್ಥಿಸುತ್ತೇನೆ. ಈ
ವಿಷಯವನ್ನು ತಮ್ಮ ಪತ್ರಿಕೆಯ ವಾಚಕ/ರ $\frac{3}{4}$
ವಾಣಿ ವಿಭಾಗದಲ್ಲಿ ಪ್ರಕಟಿಸಿ ಸಂಬಂಧಪಟ್ಟವರ
ಗಮನ ಸೆಳೆಯಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಚಂದ್ರಶೇಖರಪ್ಪ X 10